<u>ಅಸಲು ದಾವಾ ಸಂಖ್ಯೆ: **-141/2022**</u> ಪಿ.ಡಬ್ಲ್ಯೂ**:-1**

ದಿನಾಂಕಃ **17.10.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ಪ್ರತಿವಾದಿ ನನಗೆ ದೂರದ ಸಂಬಂಧಿ. ಪ್ರತಿವಾದಿ ನನಗೆ ನಿರ್ದಿಷ್ಟವಾಗಿ ಯಾವ ರೀತಿ ಸಂಬಂಧಿಕರಾಗುತ್ತಾರೆ ಎಂದು ನನಗೆ ಗೊತ್ತಿಲ್ಲ. ಆದರೆ ನಮ್ಮ ತಾತ ಮುತ್ತಾತರವರ ಕರೆಯಿಂದ ಸಂಬಂಧಿಕರಾಗಬೇಕು ಎಂದು ನುಡಿಯುತ್ತಾರೆ. ನಮ್ಮ ಮತ್ತು ಪ್ರತಿವಾದಿಯ ಮನೆಯಲ್ಲಿ ಪೂಜೆ ಪುನಸ್ಕಾರ ಇದ್ದ ಸಮಯದಲ್ಲಿ ನಾವಿಬ್ಬರೂ ಪರಸ್ಪರ ಹೋಗಿ ಬರುತ್ತಿದ್ದೇವು. ಪ್ರತಿವಾದಿಯ ತಂದೆಯ ಹೆಸರು ಸತ್ಯನಾರಾಯಣ ಶೆಟ್ಟಿ, ಸತ್ಯನಾರಾಯಣ ಶೆಟ್ಟಿ ರವರ ಹೆಂಡತಿಯ ಹೆಸರು ಸುನಂದಮ್ಮ ಯಾನೆ ಸುಂದ್ರಮ್ಮ. ಸತ್ಯನಾರಾಯಣ ಶೆಟ್ಟಿ ರವರಿಗೆ ಒಟ್ಟು **3** ಜನ ಮಕ್ಕಳು ಅಂದರೆ ವೀಣಾ, ಪ್ರತಿವಾದಿ, ಗಾಯಿತ್ರಮ್ಮ. ದಾವಾ ಆಸ್ತಿಯು ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ದಾವಾ ಆಸ್ತಿಯು ಸತ್ಯನಾರಾಯಣ ಶೆಟ್ಟಿ ರವರ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ. ಸಾಕ್ಷಿಗೆ ಸತ್ಯನಾರಾಯಣ ಶೆಟ್ಟಿರವರು ದಿಃ **18-03-2022** ರಲ್ಲಿ ತೀರಿಕೊಂಡಿದ್ದಾರೆ ಎಂದು ವಾದ ಪತ್ರದಲ್ಲಿ ನಮೂದಾಗಿದೆ ಎಂದರೆ ಸಾಕ್ಷಿಯು ವಾದ ಪತ್ರದಲ್ಲಿ ತಪ್ಪಾಗಿ ನಮೂದಾಗಿದೆ ಆದರೆ **2020** ನೇ ಸಾಲಿನಲ್ಲಿ ತೀರಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸತ್ಯನಾರಾಯಣ ಶೆಟ್ಟಿ ರವರು ತೀರಿಕೊಳ್ಳುವ ಪೂರ್ವದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯ ಹೆಸರಿಗೆ ಯಾವುದೇ ಮರಣ ಶಾಸನ ಅಥವಾ ಕ್ರಯ ಪತ್ರವನ್ನಾಗಲೀ ಮಾಡಿಕೊಟ್ಟಿರುವುದಿಲ್ಲ. ಸತ್ಯನಾರಾಯಣ ಶೆಟ್ಟಿ ಮತ್ತು ಪ್ರತಿವಾದಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕ್ರಯದ ಕರಾರು ಪತ್ರವನ್ನು ಬರೆಸಿ ಕೊಳ್ಳುವ ಸಮಯದಲ್ಲಿ ದಾವಾ ಆಸ್ತಿಯು ಸತ್ಯನಾರಾಯಣ ಶೆಟ್ಟಿರವರ ಹೆಸರಿನಲ್ಲಿ ಇತ್ತು. ದಿಃ **11-04-2008** ರಂದು ಸತ್ಯನಾರಾಯಣ ಶೆಟ್ಟಿರವರು ಕ್ರಯದ

ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಪ್ರತಿವಾದಿ ಮತ್ತು ಅವರ ತಂದೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಸ್ವಾಧೀನರಹಿತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಕ್ರಯದ ಕರಾರು ಪತ್ರದ ಪ್ರತಿಫಲದ ಹಣವು **2,50,000** ರೂ ಆಗಿರುತ್ತದೆ. ಮುಂಗಡ ಹಣವಾಗಿ **2,00,000** ರೂ ಹಣವನ್ನು ಕೊಟ್ಟಿರುತ್ತೇನೆ. ಕರಾರಿನ ಅವಧಿಯು **3** ವರ್ಷ ಆಗಿರುತ್ತದೆ. **3** ವರ್ಷಗಳ ಅವಧಿಯ ಒಳಗೆ ಸತ್ಯನಾರಾಯಣ ಶೆಟ್ಟಿ ಆಗಲೀ ಅಥವಾ ಪ್ರತಿವಾದಿಗೆ ಆಗಲೀ ಯಾವುದೇ ನೋಟೀಸ್ ನ್ನು ವಕೀಲರ ಮೂಲಕ ಕೊಟ್ಟಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.